ಕಂಡಕ್ಟರ್ ರಾಜು, ಗುಬ್ಬಿ
*ಗಂಡಹೆಂಡತಿಯ ಜಗಳ ಉಂಡು ಮಲಗುವ ತನಕ; ಪ್ರೇಮಿಗಳ ಜಗಳ?*



ಮೊಬೈಲ್‌ನ ಕರೆನ್ಸಿ ಮುಗಿಯುವ ತನಕ!

ಪಿ.ಜಿ. ರಾಘವೇಂದ್ರ, ಮೈಸೂರು
*ನಮ್ಮ ಮಂತ್ರಿಗಳು ಅಷ್ಟೊಂದು ಉಗಿಸಿಕೊಂಡರೂ ಮಾನನಷ್ಟ ಮೊಕದ್ದಮೆ ಏಕೆ ಹೂಡಿಲ್ಲ?*
ಇಲ್ಲದ ಮಾನದ ಜೊತೆ ಇರುವ ಹಣವೂ ನಷ್ಟವಾಗುತ್ತದಲ್ಲ!

ಅಶ್ವಿನಿ ಹೆಗಡೆ, ಭೈರುಂಬೆ
*ನಮ್ಮ ದೇಹ ಬೆಳೆಯುವುದು ನಮ್ಮ ಅನುಭವಕ್ಕೆ ಬರುವುದಿಲ್ಲ, ಏಕೆ?*
ಅದು ಪೂರಿಯಂತೆ ತಕ್ಷಣ ಉಬ್ಬದೆ, ಎಲಾಸ್ಟಿಕ್‌ನಂತೆ ತಕ್ಷಣ ಉದ್ದವಾಗದೆ, ಚಿತ್ರಗಳಲ್ಲಿ ಹನುಮಂತ ಬೆಳೆದಾಗ ಹಿನ್ನೆಲೆಯಲ್ಲಿ ಕೊಡುವ ಟೋಂಯ್ ಎಂಬ ಬ್ಯಾಕ್‌ಗ್ರೌಂಡ್ ಮ್ಯೂಸಿಕ್ ಇಲ್ಲದೆ ಬೆಳೆಯುವುದರಿಂದ!

ಆ.ರಾ.ಮಂಜುನಾಥ, ಗದರೆ
*ಹಳ್ಳಿಗಳ ಆಂಟಿಗಳು ಪೇಟೆಗಳ ಆಂಟಿಗಳನ್ನೇ ಹಿಂದಿಕ್ಕುತ್ತಿದ್ದಾರಲ್ಲಾ, ಅಂಕಲ್‌ಗಳ ಪಾಡೇನು?*
ವಾರೆವಾ! ನಾಟಿ ಆಂಟಿಯರೆಲ್ಲಾ naughty ಆಂಟಿಯರಾಗಿದ್ದಾರೆ ಎಂದು ಖುಷಿಯಲ್ಲಿದ್ದಾರೆ!

ಮಹಾವೀರ ಕಾಸರ, ಶಿವಮೊಗ್ಗ
*ಬೆಲೆ ಏರಿಕೆ ಆಗದ ವಸ್ತು ಯಾವುದು?*



ಗಂಡ!

ಜಾಕೋಬ್ ಡಿಸೋಜ, ಕುರುವಳ್ಳಿ
*ಅರವತ್ತು ದಾಟಿದರೆ ಅರಳುಮರಳು; ಹದಿನೆಂಟು ದಾಟಿದರೆ?*
ರಾತ್ರಿಯೆಲ್ಲಾ ಹೊರಳು ಹೊರಳು!

ಕೆ.ಹೆಚ್.ರಾಮಕೃಷ್ಣಾರೆಡ್ಡಿ, ಯಲಹಂಕ
*ನಮ್ಮ ದೇಶದಲ್ಲಿ ಇದು ಸಾಧ್ಯಾನೇ ಇಲ್ಲ ಎನ್ನುವುದಕ್ಕೆ ಒಂದು ಉದಾಹರಣೆ ಕೊಡಿ...?*
ಹಿಮಾಲಯವನ್ನು ನೈಋತ್ಯಕ್ಕೆ ತಂದು, ಕಾವೇರಿಯನ್ನು ಈಶಾನ್ಯಕ್ಕೆ ಹರಿಸಿ, ದೇಶವನ್ನು ಫುಲ್ ವಾಸ್ತು ಪ್ರಕಾರ ಮಾಡುವುದು!

ಎನ್.ವಸಂತಾ, ಕತ್ತರಗುಪ್ಪ
*ಮೊದಲು ಮದುವೆಯ ಚಿಂತೆ, ಅನಂತರ ಮಕ್ಕಳಾಗದ ಚಿಂತೆ; ತದನಂತರ ಮಕ್ಕಳಾದ ಬಗ್ಗೆ ಚಿಂತೆ. ಇದಕ್ಕೆ ಅಂತ್ಯವೆಲ್ಲಿ?*
ಆರಂಭದಲ್ಲೇ! ಮದುವೆಯ ಚಿಂತೆ ಬಿಡಿ, ಮಿಕ್ಕಾವ ಚಿಂತೆಯೂ ನಿಮ್ಮ ಬಳಿ ಸುಳಿಯುವುದೂ ಇಲ್ಲ!

ಎನ್.ಪ್ರಕಾಶ. ದೇವನಹಳ್ಳಿ
*ಸತ್ಯವಾದರೂ ಸತಾಯಿಸಿ ನೋಡಬೇಕಂತೆ, ಹೌದಾ ಸಾರ್?*
ಇದನ್ನು ವಕೀಲೀ ಭಾಷೆಯಲ್ಲಿ ಕ್ರಾಸ್ ಎಕ್ಸಾಮಿನೇಷನ್ ಎನ್ನುತ್ತಾರೆ!

ನಾಗರಾಜ ಪಾಂಡುರಂಗ ನಾಯ್ಕ, ಕಾರವಾರ
*ಸ್ತ್ರೀ ಪುರುಷನ ಬಾಳಿನಲ್ಲಿ ದೇವತೆಯಾಗುವುದು ಯಾವ ಸಂದರ್ಭದಲ್ಲಿ?*
ಫೋಟೋ ಸೇರಿ ಹಾರ ಹಾಕಿಸಿಕೊಂಡಾಗ!

ರಾಜಶೇಖರರೆಡ್ಡಿ, ಕಿರೇಕೊಳಂ
*ಮಣ್ಣಿನಮಗ, ದಾರಿ ತಪ್ಪಿದ ಮಗ, ಸಖತ್ ಹಾಟ್ ಮಗ, ಇತ್ಯಾದಿ ಮಗಗಳು ಇದಾವೆ; ಮಗಳು ಏಕಿಲ್ಲ?*
ಮಗಳು ಮಣ್ಣುತಿನ್ನುವ ಕೆಲಸ ಮಾಡುವಂತಿಲ್ಲ, ದಾರಿ ತಪ್ಪುವಂತಿಲ್ಲ, ಹಾಗೂ ಸಖತ್ ಹಾಟ್ ಇದ್ದರೆ ನೋಡುಗರ ದೃಷ್ಟಿ ಒಳ್ಳೆಯದಾಗಿರುವುದಿಲ್ಲವಲ್ಲ!

ನರಸಿಂಹ ಎಂ.ಪೈ. ಹೊನ್ನಾವರ
*ರಾಮನಿಗೆ ಒಂದೇ ತಲೆ, ರಾವಣನಿಗೇಕೆ ಹತ್ತು...?*
ಆಗಾಗ್ಗೆ ತಲೆ ಹೋಗುವ ಕೆಲಸಗಳನ್ನು ಮಾಡುತ್ತಿದ್ದುದರಿಂದ!

ಅಮರಯ್ಯ ಪತ್ರಿಮಠ, ಶೋರಾಪುರ
*ಲೆಕ್ಕಾಚಾರವಿಲ್ಲದ ಬದುಕು...?*
ಬಹಳ ಸೊಗಸು ಎಂದ ಗಣಿತದಲ್ಲಿ ಫೇಲ್ ಆದ ವಿದ್ಯಾರ್ಥಿ!

ಪಿ.ಎಸ್.ಶ್ರೀವತ್ಸ, ಬೆಂಗಳೂರು
*ಪಂಚಾಂಗ: ಇದರ ನಿಜವಾದ ಅರ್ಥ?*
ಶ್ರಾದ್ಧದ ದಿನಾಂಕಗಳನ್ನು ಗುರುತು ಹಾಕಿಕೊಳ್ಳುವ ತಿಥಿ ಡೈರಿ!

## ಬಹುಮಾನಿತ ಪ್ರಶ್ನೆ

ಲಕ್ಷ್ಮಿ ಎಸ್.ಮೆಳ್ಳಿಗೇರಿ, ಗಿರಗಾಂವ, ಮಹಾರಾಷ್ಟ್ರ
*ಹೆರಿಗೆ ಆಸ್ಪತ್ರೆಗೆ ಹೆಣ್ಣುಮಕ್ಕಳ ಹೆರಿಗೆ ಆಸ್ಪತ್ರೆ ಎಂದೇಕೆ ಬರೆಯುತ್ತಾರೆ?*
ಶುದ್ಧ ತಪ್ಪು; ಯುವತಿಯರ/ಮಹಿಳೆಯರ ಎಂದಿರಬೇಕಿತ್ತು. ಮಕ್ಕಳಿಗೆ ಮಕ್ಕಳಾಗುವುದಿಲ್ಲ ಎಂಬುದನ್ನೂ ಅರಿಯರವರು!

ಬಿಂಡಿಗನವಿಲೆ ರಂಗರಾಜು, ಬೆಂಗಳೂರು
*ರಾಮ್‌ಜೀ, ನಿಮ್ಮಿಂದ ಉತ್ತರಿಸಲಾಗದೇ ಇರುವಂತಹ ಒಂದು ಪ್ರಶ್ನೆ ಕೇಳಬೇಕೆಂಬಾಸೆ, ಸುಳುಹು ನೀಡುವಿರಾ?*
'ಒಂದೇ ಪದದಲ್ಲಿ ಉತ್ತರಿಸಿ – ನೀವು ಹುಡುಗಿಯರನ್ನು ಚುಡಾಯಿಸುವುದನ್ನು ನಿಲ್ಲಿಸಿದ್ದೀರಾ?' ಎಂದು ಕೇಳಿದರೆ ಒಂದೇ ಪದದಲ್ಲಿ ಉತ್ತರಿಸಲಾಗದೆ ಸೋಲುತ್ತೇನೆ!

ರಮೇಶ್, ಹನುಮನಾಳು
*ಪ್ರೀತಿ, ಪ್ರೇಮ ಕಥೆಯಲ್ಲಿ ಓದಲು, ಸಿನಿಮಾದಲ್ಲಿ ನೋಡಲು ಚೆನ್ನ; ಮಾಡಲು... ಅನುಭವಿಸಲು...?*



ಹಣ ಪೋಲು, ಟೈಂ ಹಾಳು, ತಲೆ ಬೋಳು!

ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ
*ಯಾರೋ ಯಾರಿಗೋ ಚಪ್ಪಾಳೆ ತಟ್ಟಿದರೆ ನಾವೇಕೆ ತಿರುಗಿ ನೋಡುತ್ತೇವೆ?*
ನಾವು ಕರೆದಲ್ಲಿಗೆ ಬರದ ಆಟೋ ಅವರಿಗೆ ಸಿಕ್ಕಿಬಿಟ್ಟಿತೇನೋ ಎಂಬ ಬೇಗುದಿಗೆ!

ಎಂ.ಬಿ. ಖೋದಾನಪುರ, ಸವದತ್ತಿ
*ಸಲೀಂ-ಅನಾರ್ಕಲಿ ಮತ್ತೆ ಜನಿಸಿ ಬಂದರೆ?*
ಪಿಡಬ್ಲ್ಯೂಡಿ. ಕಟ್ಟಿದ ಗೋಡೆ ಒಡೆದು ಇಬ್ಬರೂ ಮತ್ತೆ ಒಂದಾಗಬಹುದು!

ವಿ.ಹಮೀದ್, ವಿಟ್ಲ
*ಲವರ್ ಕೈಬಿಡುವ ಹಂತದಲ್ಲಿದ್ದಾಳೆ, ಏನು ಮಾಡಲಿ?*
ನೀವೇ ಮೊದಲು ಕೈ ಕೊಟ್ಟುಬಿಡಿ!

ಜೆ.ಸುಬ್ಬನಾಯಕ, ಬೊಮ್ಮಲಾಪುರ
*ಸಿರಿಬಂದ ಕಾಲಕ್ಕೆ ಕರೆದು ದಾನವ ಮಾಡು ಎನ್ನುವರು; ಬಡತನ ಬಂದಾಗ?*
ದಾನ ಮಾಡುವವರ ಅಡ್ರೆಸ್ ಬೇಡು!

■ ರಾಮ್